ಮನದಾಳದ ನೋವು ಅರ್ಥ ಮಾಡಿಕೊಂಡ ಸುಜಾತ, 'ಅವಳೊಂದ್ಸಲ ಕೌನ್ಸಲಿಂಗ್ ಮಾಡಿದರೆ ಮುಗೀತು ಚಿಗ, ಎಂಥಾ ಅಬ್‌ನಾರ್ಮಲ್ ಪರ್ಸನ್ ಆದ್ರು ಸರಿ ಹೋಗ್ತಾರೆ. ಅಂತಾದ್ರಲ್ಲಿ ನಮ್ಮ ರೂಪಾಳದೇನು ಲೆಕ್ಕ? ಒಂದೇ ಸಿಟ್ಟಿಂಗ್‌ಗೆ ಸರಿ ಹೋಗ್ತಾಳೆ' ಎಂದು ಚಿಕ್ಕಮ್ಮನ ಮನದ ನೆಲದಲ್ಲಿ ಭರವಸೆಯ ಬೀಜ ಬಿತ್ತಿದ ಸುಜಾತಳಿಗೆ ಫಿನಿಕ್ಸ್ ಪಕ್ಷಿಯಂತೆ ಕಷ್ಟಗಳ ಬೂದಿಯಿಂದ ಮೇಲಕ್ಕೆ ಜಿಗಿದ ಶ್ರಾವಣಿಯ ಹೋರಾಟದ ಬದುಕು ಕಣ್ಣಮುಂದೆ ಹಾದು ಹೋಯಿತು...

ಮಧುರ ಆಪ್ತ ಸಲಹಾ ಕೇಂದ್ರ ಎನ್ನುವ ಕೌನ್ಸೆಲಿಂಗ್ ಸೆಂಟರ್ ಪ್ರಾರಂಭಿಸಿದಾಗ ಎಲ್ಲರೂ ಅವಹೇಳನ ಮಾಡಿದವರೇ. ಅವಳ ದುಃಖಾನ ಅವಳೇ ಮರಿಯೋಕಾಗಲ್ಲ. ಅಂತಾದ್ರಲ್ಲಿ ಬೇರೆಯವರ ಮನಸ್ಸಿನ ದುಗುಡಾನಾ ದೂರ ಮಾಡ್ತಾಳಾ? ಎಂದು ಮಾತಾಡಿದವರೇ ಬಾಯಿ ಮೇಲೆ ಬೆರಳಿಟ್ಟುಕೊಳ್ಳುವಂತೆ ನಾಕೇ ವರ್ಷದಲ್ಲಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕೇಳಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರುವ ಎತ್ತರಕ್ಕೆ ಬೆಳೆದ ಶ್ರಾವಣಿಯ ಬದಲಾದ ಬದುಕಿನ ಬಗ್ಗೆ ಮೆಲುಕು ಹಾಕುವುದರೊಳಗೆ ಕಾರು ಮಧುರ ಆಪ್ತ ಸಲಹಾ ಕೇಂದ್ರದ ಮುಂದೆ ನಿಂತಿತ್ತು.

ಸುಜಾತಾಳ ಪರಿವಾರವನ್ನು ಮುಗುಳ್ನಗೆಯೊಂದಿಗೆ ಬರ ಮಾಡಿಕೊಂಡ ಶ್ರಾವಣಿ, ಬಹಳ ದಿನಗಳ ನಂತರ ಗೆಳತಿಯನ್ನು ನೋಡಿದ ಖುಷಿಗೆ ಮನದಲ್ಲಿ ಮೂಡಿದ ಮಾತಿಗೂ ನಿಲುಕದ ಪುಳಕವನ್ನು ಆಪ್ಯಾಯಮಾನವಾದ ಆಲಿಂಗನದೊಂದಿಗೆ ತಣಿಸಿಕೊಂಡಿದ್ದಳು. ಗೆಳತಿಯನ್ನು ಕಂಡ ಸಂತಸದಲ್ಲಿ ಮೈ ಮರೆಯದೆ ದೂರದ ಪಯಣ ಮಾಡಿ ಬಂದಿರುವ ಅವರಿಗೆ ಫ್ರೆಶಪ್ ಆಗಲು ರೆಸ್ಟ್‌ರೂಮಿಗೆ ಕಳಿಸಿ, ಅವರು ಮುಖ ತೊಳೆದು ಬರುವುದರೊಳಗೆ ಉಪಾಹಾರ ತರಿಸಿದ್ದಳು. 'ಇದೆಲ್ಲ ಯಾಕೆ ತರ್ಸಕೋದೆ ಶ್ರಾವಿ...' ಸುಜಾತ ಮುಜುಗರ ಪಟ್ಟುಕೊಂಡಳು. 'ನೀನು ಸಂಕೋಚದ ಸುಕುಮಾರಿ ಅನ್ನೋದು ಕಾಲೇಜು ದಿನಗಳಿಂದಲೂ ಗೊತ್ತು. ನಿನಗಿಷ್ಟವಾದ ಮಸಾಲೆದೋಸೆ ತರ್ಸಿದಿನಿ ಸುಮ್ನೆ ತಿನ್ನು ಬಾರೆ' ಎಂದು ಸಲಿಗೆಯಿಂದ ಶ್ರಾವಣಿ ಕರೆದಾಗ. ತನ್ನ ಇಷ್ಟಗಳ ಬಗ್ಗೆ ಈಗಲೂ ನೆನಪಿಟ್ಟುಕೊಂಡಿರುವ ಗೆಳತಿಯ ಬಗ್ಗೆ ಸುಜಾತಳಿಗೆ ಹೃದಯ ತುಂಬಿ ಬಂದಿತ್ತು.

ನಾಲ್ಕು ಕೋಣೆಯಿರುವ ಆ ಮನೆಯಲ್ಲಿ ಒಂದು ರಿಸೆಪ್ಷನ್ ಹಾಲ್. ಅದರ ಎದುರುಗೋಡೆಗೆ ಕ್ಲಿನಿಕ್‌ನೊಳಗಡೆ ಕಾಲಿಡುವವರ ಮನಸ್ಸಿನಾಳವನ್ನ ತಿಳಿದುಕೊಳ್ಳುವ ತೀಕ್ಷ್ಣ ಕಣ್ಣುಗಳೊಂದಿಗೆ ಫೋಟೊ ಫ್ರೇಮ್‌ನಲ್ಲಿ ಬಂಧಿಯಾಗಿರುವ ಸಿಗ್ಮಂಡ್ ಫ್ರಾಯ್ಡ್ ಎದುರುಗೊಳ್ಳುತ್ತಾನೆ. ರಿಸೆಪ್ಷನ್ ಕೌಂಟರಿನಲ್ಲಿ ಕುಳಿತಿದ್ದ ನೀತು ರೈ ಎನ್ನುವ ಇಪ್ಪತ್ತಾರರ ಹರೆಯದ ಹೆಣ್ಣಿನ ನಗುವಿನ ಹಿಂದಿರುವ ನೋವನ್ನ ಸೂಕ್ಷ್ಮವಾಗಿ ಸುಜಾತಳಿಗೆ ಪರಿಚಯಿಸಿದ ಶ್ರಾವಣಿ ಸ್ವಲ್ಪ ಹೊತ್ತು ಗೆಳತಿಯೊಂದಿಗೆ ಲೋಕಾಭಿರಾಮವಾಗಿ ಮಾತಾಡುತ್ತಲೇ ರೂಪಾಳ ಪ್ರೈಮರಿ ಮಾಹಿತಿಯನ್ನು ತಿಳಿದುಕೊಂಡಳು. ಪ್ರಶಾಂತವಾಗಿರುವ ಕ್ಲಿನಿಕ್‌ನಲ್ಲಿ ಇಂಪಾದ ಸಂಗೀತ, ಸದ್ದು ಮಾಡದೆ ತಿರುಗುವ ಸೀಲಿಂಗ್ ಫ್ಯಾನಿನ ಜೊತೆ ಗಸ್ತಿ ಹೊಡೆಯುತ್ತಿತ್ತು. ಘಾಸಿಗೊಂಡ ಮನಸ್ಸುಗಳಿಗೆ ಮ್ಯೂಸಿಕ್ ಥೆರಪಿ ಅನ್ನೋದು ಪ್ರಥಮ ಚಿಕಿತ್ಸೆ ಇದ್ದಂತೆ ಎಂದು ಶ್ರಾವಣಿ ಭಾವಿಸಿದ್ದಳು. ಅದರ ಜೊತೆಗೆ ಬದುಕನ್ನು ಅತಿಯಾಗಿ ಪ್ರೀತಿಸುವಂತೆ ಪ್ರೇರೇಪಿಸುವ ಲೋಕವಿಖ್ಯಾತರ ನುಡಿಮುತ್ತುಗಳು ಗೋಡೆ ಬರಹಗಳಾಗಿ ಅಲಂಕಾರಗೊಂಡಿದ್ದವು. ಕಲಾವತಿಯನ್ನು ಮತ್ತು ತನ್ನ ಗೆಳತಿಯನ್ನು ರಿಸೆಪ್ಷನ್ ಹಾಲ್‌ನಲ್ಲಿ ಕೂರಿಸಿ, ರೂಪಾಳೊಂದಿಗೆ ಆಪ್ತವಾಗಿ ಮಾತನಾಡುತ್ತಾ ಕೌನ್ಸೆಲಿಂಗ್ ಕೋಣೆಗೆ ಕರೆದುಕೊಂಡು ಹೋದಳು.

ಸುಜಾತಳಿಗೆ ಸಾವಧಾನವಾಗಿ ಕುಳಿತು ಟಿ.ವಿ ನೋಡುವ ವ್ಯವಧಾನವಿರಲಿಲ್ಲ. ರೂಪಾಳ ಮಾನಸಿಕ ತುಮುಲ, ತೊಳಲಾಟ ಏನಿರಬಹುದು ಎನ್ನುವ ಕುತೂಹಲ ತನ್ನ ಚಿತ್ತದಲ್ಲಿ ಊಹೆಗಳ ಹುತ್ತ ಬೆಳೆಯುವಂತೆ ಮಾಡಿತ್ತು. ಅದರ ನಿವಾರಣೆಗೆ ನೀತು ರೈ ಹತ್ತಿರ ಮಾತಿಗೆ ನಿಂತಳು. ಆಕೆಯೂ ಸಹ ಬಹುದಿನಗಳಿಂದ ಪರಿಚಯವಾದವಳೇನೊ ಎಂಬಂತೆ ಆತ್ಮೀಯವಾಗಿ ಮಾತನಾಡುತ್ತಾ, 'ಕಷ್ಟ ಕಾಲದಲ್ಲಿ ನೀವು ಮಾಡಿದ ಸಹಾಯವನ್ನು ಮೇಡಮ್ ಅವರು ದಿನಕ್ಕೊಮ್ಮೆಯಾದರೂ ನೆನಪಿಸಿಕೊಳ್ಳುತ್ತಾರೆ. ಆ ಕೃತಜ್ಞತೆಗೋಸ್ಕರನೊ ಏನೊ, ಈ ದಿನ ನೀವು ಬರ್ತೀರಾಂತ ಗೊತ್ತಾಗಿ ಅವರನ್ನು ಕನ್ಸಲ್ಟ್ ಮಾಡೋಕೆ ಬೇರೆಯವರಿಗೆ ಯಾರಿಗೂ ಅಪಾಯಿಂಟ್‌ಮೆಂಟ್